## ಸರ್ಕಾರಕ್ಕೆ ಕೃಷಿ ಬೆಲೆ ಆಯೋಗ ಶಿಫಾರಸು: ಪ್ರಕಾಶ್ ಕಮ್ಮರಡಿ

# ಕಡಿಮೆ ಬೆಲೆ ವಿರುದ್ಧ ಕಠಿಣ ಕ್ರಮ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ‘ಸರ್ಕಾರ ನಿಗದಿಪಡಿಸಿದ ಬೆಲೆಗಿಂತ ಕಡಿಮೆ ಬೆಲೆಗೆ ಆಹಾರಧಾನ್ಯ ಹಾಗೂ ಬೇಳೆಕಾಳುಗಳನ್ನು ಖರೀದಿ ಅಥವಾ ಮಾರಾಟ ಮಾಡಿದರೆ ಅಂತಹವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ’ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಹೇಳಿದರು.

‘ಕೆಲವು ಕಡೆ ಸರ್ಕಾರ ನಿಗದಿಪಡಿಸಿದ ಬೆಲೆಗಿಂತಲೂ ಕಡಿಮೆ ಬೆಲೆಗೆ ಬೇಳೆಕಾಳು ಮಾರಾಟ ಹಾಗೂ ಖರೀದಿ ಮಾಡಿರುವ ಬಗ್ಗೆ ವರದಿಗಳು ಬಂದಿವೆ. ಇದನ್ನು ತಡೆಗಟ್ಟುವ ಉದ್ದೇಶದಿಂದ ಕಠಿಣ ಕ್ರಮಕೈಗೊಳ್ಳುವ ಅನಿವಾರ್ಯತೆ ಬಂದೊದಗಿದೆ’ ಎಂದು ಸೋಮವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಕೃಷಿ ಉತ್ಪನ್ನದ ವೆಚ್ಚದ ಆಧಾರದ ಮೇಲೆ ಕೃಷಿ ಬೆಲೆ ಆಯೋಗವು ಕೆಲವು ಬೆಳೆಗಳಿಗೆ ಬೆಲೆ ನಿಗದಿಪಡಿಸಿದೆ. ಈ ಬೆಲೆಗಿಂತ ಕಡಿಮೆ ಬೆಲೆಗೆ ವ್ಯಾಪಾರ ವಹಿವಾಟು ನಡೆಸಬಾರದು. ಕಬ್ಬಿಗೆ ಶಾಸನಬದ್ಧ ಬೆಲೆ ನಿಗದಿ ಮಾಡಿದಂತೆ ಇತರ ಬೆಳೆಗಳಿಗೂ ನಿಗದಿ ಮಾಡಬೇಕೆಂದು ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ಶಾಸನಬದ್ಧ ಬೆಲೆ ನಿಗದಿಯಾದ ನಂತರ ಇದಕ್ಕಿಂತ ಕಡಿಮೆ ಬೆಲೆಗೆ ಖರೀದಿ ಅಥವಾ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ’ ಎಂದು ನುಡಿದರು.

**ಬೆಂಬಲ ಬೆಲೆ** (ಪ್ರತಿ ಕ್ವಿಂಟಲ್‌ಗೆ)

| ಬೆಳೆ | ವರ್ಗ | 2015–16 | 2016–17 |
|---|---|---|---|
| ಭತ್ತ | ಸಾಮಾನ್ಯ | ₹1,410 | ₹1,470 |
| | ಗ್ರೇಡ್– ಎ | ₹1,450 | ₹1,510 |
| ಜೋಳ | ಹೈಬ್ರೀಡ್ | ₹1,570 | ₹1,625 |
| | ಮಾಲ್ದಂಡಿ | ₹1,590 | ₹1,650 |
| ಸಜ್ಜೆ | | ₹1,275 | ₹1,330 |
| ಮೆಕ್ಕೆಜೋಳ | | ₹1,325 | ₹1,365 |
| ರಾಗಿ | | ₹1,650 | ₹1,725 |
| ತೊಗರಿ | | ₹4,625 | ₹5,050 |
| ಹೆಸರು | | ₹4,850 | ₹5,225 |
| ಉದ್ದು | | ₹4,625 | ₹5,000 |
| ಸೋಯಾಬೀನ್ | | ₹2,600 | ₹2,775 |
| ಸೂರ್ಯಕಾಂತಿ ಬೀಜ | | ₹3,800 | ₹3,950 |
| ಗುರೆಳ್ಳು | | ₹3,650 | ₹3,825 |
| ಎಳ್ಳು | | ₹4,700 | ₹5,000 |
| ಹತ್ತಿ | ಮಧ್ಯಮ | ₹3,800 | ₹3,860 |
| | ಉತ್ತಮ | ₹4,100 | ₹4,160 |

‘ಸರ್ಕಾರ ನಿಗದಿ ಮಾಡಿರುವ ಈ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿ ಅಥವಾ ಮಾರಾಟ ಮಾಡುವುದನ್ನು ಮಾರುಕಟ್ಟೆ ಅಧಿಕಾರಿಗಳು, ಎ.ಪಿ.ಎಂ.ಸಿ ಅಧಿಕಾರಿಗಳು ತಡೆಗಟ್ಟಬೇಕಾಗಿದೆ. ಇದರ ಬಗ್ಗೆ ಜಿಲ್ಲಾಧಿಕಾರಿ ನಿಗಾ ವಹಿಸಬೇಕಾಗಿದೆ’ ಎಂದರು.



ಕಮ್ಮರಡಿ

ಜಿಲ್ಲೆಯ ಬಹುತೇಕ ಕಡೆ ರೈತರು ಲಾವಣಿ ಆಧಾರದ ಮೇಲೆ ಒಕ್ಕಲುತನ ಮಾಡುತ್ತಿದ್ದಾರೆ. ಬೆಳೆ ವಿಮೆ ಪರಿಹಾರ ವಿತರಿಸುವಾಗ ಜಮೀನಿನ ಮಾಲೀಕರಿಗೆ ನೀಡಬೇಕೋ ಅಥವಾ ಒಕ್ಕಲುತನ ಮಾಡಿದವರಿಗೆ ನೀಡಬೇಕೋ ಎನ್ನುವ ಸಮಸ್ಯೆ ಉದ್ಭವಿಸುತ್ತದೆ. ಇದನ್ನು ತಡೆಗಟ್ಟಲು ಲಾವಣಿ ರೈತರಿಗೆ ಗುರುತಿನ ಚೀಟಿ ನೀಡಬಹುದೇ ಎನ್ನುವ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ವೆಂಕಟರಾಮ ರೆಡ್ಡಿ ಪಾಟೀಲ ಅವರಿಗೆ ಪ್ರಕಾಶ ಕಮ್ಮರಡಿ ಸೂಚಿಸಿದರು.

**ತೊಗರಿ ಬೇಳೆ ವಿತರಣೆಗೆ ಸಲಹೆ:** ‘ಪಡಿತರ ಕಾರ್ಡ್‌ಗೆ ಪ್ರತಿ ತಿಂಗಳು 2 ಕೆ.ಜಿ. ತೊಗರಿ ಬೇಳೆ ವಿತರಿಸುವ ಬಗ್ಗೆ ಆಹಾರ ಸಚಿವರ ಜೊತೆ ಚರ್ಚೆ ನಡೆದಿದೆ’ ಎಂದರು.

**ಆರಂಭವಾಗದ ಇ–ಮಾರ್ಕೆಟಿಂಗ್:** ‘ಆನ್‌ಲೈನ್ ಮಾರ್ಕೆಟಿಂಗ್ ವ್ಯವಸ್ಥೆ ಇನ್ನೂ ಜಾರಿಯಾಗಿಲ್ಲ. ಆಹಾರ ಧಾನ್ಯಗಳು, ತರಕಾರಿಗಳ ವರ್ಗೀಕರಣ ಮಾಡಲಾಗಿಲ್ಲ. ಫಾರ್ಮೆಟ್ ಕೂಡ ಬಂದಿಲ್ಲ’ ಎಂದು ಕೃಷಿ ಇಲಾಖೆ ಅಧಿಕಾರಿಗಳು ಅಧ್ಯಕ್ಷರ ಗಮನಕ್ಕೆ ತಂದರು.